ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 15 ರಿಂದ 17 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಹಾಗೂ ನನ್ನ ಅಣ್ಣತಮ್ಮಂದಿರರ ನಡುವೆ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಾಟ್ನಿಯಾದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನಾವೆಲ್ಲರೂ ಅಣ್ಣತಮ್ಮಂದಿರರು ಅಡುಗೆ ಹಾಗೂ ವಾಸಕ್ಕಾಗಿ ಬೇರೆ ಬೇರೆ ಇದ್ದೇವೆ ಎಂದರೆ ನಿಜ. ನನ್ನ ಸಹೋದರ ಮೃತ ಬಸವರಾಜ ಯಾವುದೇ ಉದ್ಯೋಗವನ್ನು ಮಾಡದೇ ಹಾಗೆ ತಿರುಗಾಡುತ್ತಿದ್ದನು. ಆತನಿಗೆ ಮದುವೆಯಾಗಿತ್ತು. ಆತನ ಹೆಂಡತಿಯ ಹೆಸರು ಜಾನಕಿ ಅಂದರೆ 15 ನೇ ಪ್ರತಿವಾದಿ ಇರುತ್ತಾಳೆ. ಆತನಿಗೆ ಒಬ್ಬ ಗಂಡು ಮಗ ಹಾಗೂ ಒಬ್ಬಳು ಹೆಣ್ಣುಮಗಳು ಇರುತ್ತಾರೆ. ಅವರೆಂದರೆ 16 ಮತ್ತು 17ನೇ ಪ್ರತಿವಾದಿಯರು ಆಗಿರುತ್ತಾರೆ. 17 ನೇ ಪ್ರತಿವಾದಿಯು ಸಹ ಯಾವುದೇ ಉದ್ಯೋಗವನ್ನು ಮಾಡುವುದಿಲ್ಲ. ನನ್ನ ಸಹೋದರ ಬಸವರಾಜ ಯಾವುದೇ ಉದ್ಯೋಗ ಮಾಡುತ್ತಿರದೇ ಇದ್ದರೂ ಸಹ ಆತನಿಗೆ 15 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಟ್ಟಿರುತ್ತಾರೆ. ಆತನ ಮದುವೆಯ ಖರ್ಚನ್ನು ನಾವೆಲ್ಲರೂ ಅಣ್ಣತಮ್ಮಂದಿರರು ಸೇರಿಕೊಂಡು ಮಾಡಿರುತ್ತೇವೆ. ಸಾಕ್ಷಿ ಮುಂದುವರೆದು ನನ್ನ ಹಾಗೂ ಮೃತ ಬಸವರಾಜನ ಮದುವೆ ಒಂದೇ ಬಾರಿಗೆ ಒಂದೇ ಮಂಟಪದಲ್ಲಿ ಆಗಿರುತ್ತದೆ. ಬಸವರಾಜ ಬದುಕಿರುವವರೆಗೂ ಆತನ ಹೆಂಡತಿ ಮಕ್ಕಳು ಹಾಗೂ ಮನೆಯ ಖರ್ಚನ್ನು ನಾವೆಲ್ಲರೂ ಅಣ್ಣತಮ್ಮಂದಿರರು ಸೇರಿ ಮಾಡುತ್ತಿದ್ದೆವು. ಸದರಿ ಬಸವರಾಜ ತನ್ನ 35 ನೇ ವಯಸ್ಸಿನಲ್ಲಿ ತೀರಿಕೊಂಡಿರುತ್ತಾನೆ. ಆತನಿಗೆ ಕುಡಿಯುವ ಚಟ ಇತ್ತು. ಆತನ ಖರ್ಚಿಗಾಗಿ ಹಣ ಕೊಟ್ಟ ಬಗ್ಗೆ ಯಾವುದೇ ಲಿಖಿತ ದಾಖಲೆಯಾಗಲೀ ಅಥವಾ ಆದಾಯ ತೆರಿಗೆಯಲ್ಲಿ

ನಮೂದಿಸಿರುವುದಿಲ್ಲ. ಆತನು ಆರೋಗ್ಯವಾಗಿದ್ದನು. ಸಾಕ್ಷಿ ಮುಂದುವರೆದು 15 ನೇ ವಯಸ್ಸಿನವರೆಗೆ ಸದೃಢನಾಗಿದ್ದು, ನಂತರ ಕುಡಿಯುವ ಚಟಕ್ಕೆ ಬಲಿಯಾಗಿರುತ್ತಾನೆ. ಮದುವೆಯಾದಾಗ ಆತನ ವಯಸ್ಸು 25 ವರ್ಷ ಇತ್ತು. ಆತ ಕುಡಿತದ ಚಟಕ್ಕೆ ಬಲಿಯಾಗಿ ಯಾವುದೇ ಉದ್ಯೋಗ ಮಾಡುತ್ತಿಲ್ಲವಾದ್ದರಿಂದ ಮದುವೆಯನ್ನು ಮಾಡುವುದು ಬೇಡ ಎಂದು ಹೇಳಿರುವುದಿಲ್ಲ. ಆತನ ಹೆಂಡತಿ ಮಕ್ಕಳಿಗೆ ಈಗಲೂ ಸಹ ನಾವೇ ಖರ್ಚಿಗೆ ಕೊಡುತ್ತೇವೆ. ಸಾಕ್ಷಿ ಮುಂದುವರೆದು ಆತನ ಮಗ ಭರತ ಅಂದರೆ 17 ನೇ ಪ್ರತಿವಾದಿಗೆ ಬುದ್ಧಿಭ್ರಮಣೆಯಾಗಿರುತ್ತದೆ. ಸದರಿ ಮೃತ ಬಸವರಾಜನು ಕುಡಿತದ ಚಟಕ್ಕೆ ಬಲಿಯಾಗಿದ್ದು, ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ಹೇಳಿ ಬರೆಸಿರುವುದಿಲ್ಲ.

ಹಳೆ ಮುನಸಿಪಾಲಟಿಯ ಹತ್ತಿರ ನನ್ನ ಅಣ್ಣ ಕೋಣಪ್ಪ ಉರ್ಫ ಆನಂದನಿಗೆ ಸಂಬಂಧಿಸಿದ ದಿಲ್ಲಿ ಟೆಕ್ಸಟೈಲ್ಸ ಎಂಬ ಹೆಸರಿನ ಬಟ್ಟೆ ಅಂಗಡಿ ಇರುತ್ತದೆ. ಒಟ್ಟು ಗೋಕಾಕ ಪಟ್ಟಣದಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ದಿಲ್ಲಿ ಟೆಕ್ಸಟೈಲ್ಸ ಹೆಸರಿನಿಂದ ಎಷ್ಟು ಬಟ್ಟೆ ಅಂಗಡಿಗಳು ಇರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ತಿಳುವಳಿಕೆ ಬರುವ ಮುಂಚೆ ನಮ್ಮ ತಂದೆಗೆ ಒಂದೇ ಬಟ್ಟೆ ಅಂಗಡಿ ಇದ್ದು, ನನಗೆ ತಿಳುವಳಿಕೆ ಬಂದಾಗ ನಾಲ್ಕು ಬಟ್ಟೆ ಅಂಗಡಿಗಳು ಇದ್ದವು. ನಮ್ಮ ತಂದೆ ತೀರಿಕೊಳ್ಳುವ ಕಾಲಕ್ಕೆ ನಾವು ಒಟ್ಟು ನಾಲ್ಕು ಬಟ್ಟೆ ಅಂಗಡಿಗಳನ್ನು ನಡೆಸುತ್ತಿದ್ದೇವು.

ಈಗ ಸುಮಾರು 5-6 ವರ್ಷಗಳಿಂದ ನಾನು ಜಿ.ಎಸ್.ಟಿ ತುಂಬುತ್ತಾ ಬಂದಿರುತ್ತೇನೆ. ನಮ್ಮ ಅಂಗಡಿಯ ಆಡಿಟನ್ನು ಸೊಲ್ಲಾಪೂರಮಠ ಎಂಬ ಟ್ಯಾಕ್ಸ

ಕನ್ಸಲಟಂಟರವರಿಂದ ಮಾಡಿಸುತ್ತೇನೆ. ನಮ್ಮ ಕುಟುಂಬದ ಎಲ್ಲಾ ಬಟ್ಟೆ ಅಂಗಡಿಗಳ ಆಡಿಟನ್ನು ಮಾಡಿಸುತ್ತೇವೆ. ನಮ್ಮ ಕುಟುಂಬದ ಮೂಲ ಉದ್ಯೋಗ ಬಟ್ಟೆ ವ್ಯಾಪಾರ ಇದ್ದು, ನಂತರದಲ್ಲಿ ಬೇರೆ ಬೇರೆ ವ್ಯಾಪಾರಗಳನ್ನು ಪ್ರಾರಂಭಿಸಿರುತ್ತೇವೆ. ನನ್ನ ಸಹೋದರ ಬಸವರಾಜ ಯಾವುದೇ ಉದ್ಯೋಗವನ್ನು ಮಾಡುತ್ತಿರಲಿಲ್ಲ, ಆತನು ಕುಡಿತದ ಚಟಕ್ಕೆ ಬಲಿಯಾಗಿದ್ದ ಹಾಗೂ ಆತನ ಮಗ 17 ನೇ ಪ್ರತಿವಾದಿಯು ಸಹ ಯಾವುದೇ ಉದ್ಯೋಗ ಮಾಡುತ್ತಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ತಂದೆ ಬದುಕಿದ್ದಾಗಲೇ ನಾವೆಲ್ಲರೂ ಅಣ್ಣತಮ್ಮಂದಿರರು ಬೇರೆ ಬೇರೆ ಅಂಗಡಿಗಳನ್ನು ಹಾಕಿಕೊಂಡು ಬೇರೆ ಬೇರೆ ವ್ಯಾಪಾರವನ್ನು ಮಾಡುತ್ತಿದ್ದೆವು. ಸದರಿ ಎಲ್ಲಾ ಅಂಗಡಿಗಳ ಉಸ್ತುವಾರಿಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ವ್ಯಾಪಾರವಾಗಲೀ ಪ್ರಾರಂಭದಲ್ಲಿ ಚಿಕ್ಕದಿರುತ್ತದೆಂದರೆ ನಿಜ. ಚಿಕ್ಕ ವ್ಯಾಪಾರದಿಂದ ಬಂದ ಆದಾಯದಿಂದ ಹಂತ ಹಂತವಾಗಿ ದೊಡ್ಡ ದೊಡ್ಡ ವ್ಯಾಪಾರಗಳನ್ನು ಮಾಡುತ್ತಾರೆಂದರೆ ಸರಿಯಲ್ಲ.

ನಾನು ಸನ್ 1996 ರಲ್ಲಿ ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ. ಅದಕ್ಕಿಂತ ಮುಂಚೆ ನನ್ನ ಅಣ್ಣ ವಿಠ್ಠಲ ಅಂಕದವರ ನಡೆಸುತ್ತಿದ್ದ ದಿಲ್ಲಿ ರೇಡಿಮೆಡ್ ಅಂಗಡಿಯಲ್ಲಿ ನೌಕರಿ ಮಾಡುತ್ತಿದ್ದೆ. ಸದರಿ ಅಂಗಡಿಯಲ್ಲಿ ನೌಕರಿ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸನ್ 1996 ರಲ್ಲಿ ಸ್ವಂತ ಉದ್ಯೋಗ ಪ್ರಾರಂಭಿಸುವ ಕಾಲಕ್ಕೆ ಸ್ವಂತಕ್ಕೆ ನನಗೆ ಬಂಡವಾಳ ಇತ್ತು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಸನ್ 1996 ರಲ್ಲಿ ನನ್ನ ತಂದೆ ಬದುಕಿದ್ದರು. ನಮ್ಮದು ಯಾವುದೇ ಪಾಲುದಾರಿಕೆ ಸಂಸ್ಥೆ ಇರುವುದಿಲ್ಲ. ಬಟ್ಟೆ ವ್ಯಾಪಾರದಿಂದ ಯಾರ ಹೆಸರಿಗೆ ಎಷ್ಟು ಆಸ್ತಿಗಳನ್ನು ಖರೀಸಿರುತ್ತೇವೆ ಎಂದು

ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ತಮ್ಮ ತಮ್ಮ ಸ್ವಂತ ಆದಾಯದಿಂದ ತಮ್ಮ ತಮ್ಮ ಹೆಸರಿಗೆ ಆಸ್ತಿಗಳನ್ನು ಖರೀದಿಸಿರುತ್ತಾರೆಂದು ನುಡಿಯುತ್ತಾರೆ.

ನಮ್ಮ ಎಲ್ಲಾ ಅಂಗಡಿಗಳು ದಿಲ್ಲಿ ಬ್ರ್ಯಾಂಡನಿಂದ ಪ್ರಾರಂಭವಾಗುತ್ತವೆ ಎಂದರೆ ನಿಜ. ಅದೇ ರೀತಿ ಅದೇ ಬ್ರ್ಯಾಂಡನಿಂದ ನಾವು ಆದಾಯ ತೆರಿಗೆ ಪಾವತಿಸುತ್ತೇವೆ ಎಂದರೆ ಸಾಕ್ಷಿಯು ಬೇರೆ ಬೇರೆ ಹೆಸರುಗಳಿಂದ ಪಾವತಿಸುತ್ತೇವೆ ಎಂದು ನುಡಿಯುತ್ತಾರೆ. ಪ್ರತಿಯೊಂದು ಅಂಗಡಿಗೂ ಪ್ರತ್ಯೇಕವಾಗಿ ಆದಾಯ ತೆರಿಗೆಯನ್ನು ಪಾವತಿ ಮಾಡುತ್ತೇವೆ.

ಸಿ ಟಿ ಎಸ್ ನಂಬರ -3301 ಅಂದರೆ ಮನೆ ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ. ನಮ್ಮ ಕುಟಂಬಕ್ಕೆ ಅಂದರೆ ನಮ್ಮ ತಂದೆಯ ಹೆಸರಿಗೆ ಜಮೀನು ಇದ್ದು, ಎಷ್ಟು ಜಮೀನು ಇತ್ತು ಎಂದು ಹೇಳಲು ಆಗುವುದಿಲ್ಲ. ಸದರಿ ಜಮೀನನ್ನು ವಾದಿ ಮತ್ತು 2 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ಸದರಿ ಜಮೀನಿನ ಮಾರಾಟದಿಂದ ಬಂದ ಹಣದಿಂದ ಉದ್ಯೋಗವನ್ನು ಪ್ರಾರಂಭಿಸಿರುತ್ತಾರೆಂದರೆ ಸಾಕ್ಷಿಯು ವಾದಿ ಮತ್ತು 2ನೇ ಪ್ರತಿವಾದಿ ಮಾತ್ರ ಹಣವನ್ನು ಉಪಯೋಗಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸನ್ 2012 ರವರೆಗೂ ನಮ್ಮ ಎಲ್ಲ ಅಣ್ಣ ತಮ್ಮಂದಿರುಗಳ ಸಂಬಂಧ ಚೆನ್ನಾಗಿತ್ತು. ಅಲ್ಲಿಯವರೆಗೂ ನಾವೆಲ್ಲರೂ ಅಣ್ಣತಮ್ಮಂದಿರುಗಳು ವ್ಯಾಪಾರದ ಬಗ್ಗೆ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ.

ನಮ್ಮ ತಂದೆ ವ್ಯಾಪಾರ ಮನೋಭಾವ ಹೊಂದಿದ್ದರು ಎಂದರೆ ನಿಜ. ನಮ್ಮ ತಂದೆಗೆ ನಾವುಒಟ್ಟು 08 ಜನ ಮಕ್ಕಳು ಇದ್ದು, ಎಲ್ಲರಿಗೆ ಒಂದೊಂದು ಅಂಗಡಿ ಅಥವಾ ವ್ಯಾಪಾರ ಇರಲಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಯಾವುದೇ

ಒಂದು ಅಂಗಡಿಯಲ್ಲಿ ನಷ್ಟ ಉಂಟಾದರೆ ಇನ್ನೊಂದು ಅಂಗಡಿಯಲ್ಲಿ ಬಂದ ಆದಾಯವನ್ನು ಹಾಕಿ ನಮ್ಮ ತಂದೆ ಎಲ್ಲಾ ಅಂಗಡಿಗಳ ಉಸ್ತುವಾರಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲಾ ಬಟ್ಟೆ ಅಂಗಡಿಗಳು ನಮ್ಮ ತಂದೆ ಬದುಕಿದ್ದಾಗ ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ಬಟ್ಟೆ ಖರೀದಿಗಾಗಿ ನಾವೆಲ್ಲರೂ ಅಣ್ಣತಮ್ಮಂದಿರರು ಅನುಕೂಲಕ್ಕೆ ತಕ್ಕಂತೆ ಹೋಗುತ್ತಿದ್ದೆವು ಎಂದರೆ ಸಾಕ್ಷಿಯು ಅವರ ಅವರವರ ಅಂಗಡಿಗಳ ಬಟ್ಟೆ ಖರೀದಿಗೆ ಅವರೇ ಸ್ವತಃ ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ವಾದಿ ಪ್ರಸ್ತುತ ದಾವೆಯನ್ನು ಹೂಡಿದ ನಂತರ ನಾವು ಪ್ರತ್ಯೇಕವಾಗಿ ನಮ್ಮ ಹೆಸರಿಗೆ ಸಾಲವನ್ನು ತೋರಿಸುತ್ತಿದ್ದೇವು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬಟ್ಟೆ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಇರುತ್ತದೆಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನಮ್ಮೆಲ್ಲರ ಅಣ್ಣತಮ್ಮಂದಿರರ ಹೆಸರಿಗೆ ಹೆಚ್ಚು ಕಡಿಮೆ ಆಸ್ತಿಗಳು ಇರುವುದರಿಂದ ಅವರ ಹೆಸರಿಗೆ ಇರುವ ಆಸ್ತಿಗಳು ಅವರೇ ಖರೀದಿಸಿರುತ್ತಾರೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ಅನುಕೂಲಕ್ಕೆ ತಕ್ಕಂತೆ ನಮ್ಮೆಲ್ಲರ ಹೆಸರಿಗೆ ಆಸ್ತಿಗಳನ್ನು ಖರೀದಿಸುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ನಾನು ಬಟ್ಟೆ ಅಂಗಡಿಯ ಗಲ್ಲೆಯಲ್ಲಿ ಕುಳಿತುಕೊಳುಳತ್ತಿದ್ದು, ಮೃತ ಬಸವರಾಜ ಬಟ್ಟೆ ಖರೀದಿಸಲು ಬೇರೆ ಬೇರೆ ಕಡೆಗೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಬೆಳವಣಿಗೆ ಮೃತ ಬಸವರಾಜ ಸಾಕಷ್ಟು ಶ್ರಮಪಟ್ಟಿರುತ್ತಾನೆಂದರೆ ಸರಿಯಲ್ಲ. ಆತ ತೀರಿಕೊಂಡ ನಂತರ ಆತನ ಹೆಂಡತಿ, ಮಕ್ಕಳಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ

ಬದುಕಿದ್ದಾಗಲೀಯಾಗಲೀ ಅಥವಾ ಇವತ್ತಿನವರೆಗೂ ನಮ್ಮ ಕುಟುಂಬದಲ್ಲಿ ಪಾಲುವಾಟ್ನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳುಳ್ಳ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪತ್ರವನ್ನು ಸಲ್ಲಿಸಿ, ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ಮೃತ ಬಸವರಾಜನಿಗೂ ಸಹ ಸಮನಾದ ಹಿಸ್ಸೆ ಇದ್ದರೂ ಸಹ ಆತನ ಹೆಂಡತಿ ಹಾಗೂ ಆತನ ಮಕ್ಕಳಿಗೆ ಪಾಲು ಕೊಡಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ಬಸವರಾಜ ತೀರಿಕೊಂಡ ನಂತರ ಆತನ ಹೆಂಡತಿ, ಮಕ್ಕಳನ್ನು ನಾವು ನಿರ್ಲಕ್ಷಿಸಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಆತನ ಹೆಂಡತಿ 15 ನೇ ಪ್ರತಿವಾದಿ ಜೀವನಾಂಶ ಕೋರಿ ಅರ್ಜಿಯನ್ನು ಸಹ ಸಲ್ಲಿಸಿರುತ್ತಾಳೆಂದರೆ ಸರಿಯಲ್ಲ. ಈಗ 06 ತಿಂಗಳುಗಳಿಂದ ಅವಳಿಗೆ ಯಾವುದೇ ಜೀವನಾಂಶ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜೀವನಾಂಶವನ್ನು ಒಟ್ಟು ಕುಟುಂಬದ ಆದಾಯದಿಂದ ಕೊಡುತ್ತಾ ಬಂದಿದ್ದೇವೆ ಎಂದರೆ ಸಾಕ್ಷಿಯು ಅವರವರ ಆದಾಯದಲ್ಲಿ ಕೊಡುತ್ತಾ ಬಂದಿರುತ್ತಾರೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಮಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ